MVC No.360/2019 PW-1

<u>ದಿನಾಂಕ **06.06.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಃ ಎದುರುದಾರರಾದ ಆರ್ **1** ಪರ ಶ್ರೀ ಕೆ ಟಿ ಟಿ ವಕೀಲರಿಂದ ಃ</u>

ನನ್ನ ಜನ್ಮ ದಿನಾಂಕ 25.04.2001.ಈ ಬಗ್ಗೆ ದಾಖಲೆಯನ್ನು ಹಾಜರು ಪಡಿಸುತ್ತೇನೆ. 2018 ರಲ್ಲಿ ನನಗೆ ನನಗೆ 17 ವರ್ಷ ಎಂದರೆ ನಿಜ. ಆಗ ನನ್ನ ಬಳಿ ಡಿಎಲ್ ಇರಲಿಲ್ಲ ಎಂದರೆ ನಿಜ. 2018 ರಲ್ಲಿ ನಾನು ಪ್ರಥಮ ಪಿಯುಸಿ ಪರೀಕ್ಷೆ ಬರೆದಿದ್ದೆ. ತರಕಾರಿಯನ್ನು ತರಲು ನಾನು ಸ್ಕೂಟಿಯಲ್ಲಿ ಬರುತ್ತಿದ್ದೆ. ನಮ್ಮ ಮನೆಯಿಂದ ನಾನು ಸ್ಕೂಟಿ ತರುತ್ತಿದ್ದೆ. ತರಕಾರಿ ಖರೀದಿಸಿ ವಾಪಸ್ಸು ಹೋಗುತ್ತಿದ್ದೆ. ವಾಹನದ ಮುಂದುಗಡೆ ತರಕಾರಿಯನ್ನು ಇಟ್ಟುಕೊಂಡಿದ್ದೆ. ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದೆ. ನನ್ನ ಮುಂದೆ ಒಂದು ಕಾರು ಹೋಗುತ್ತಿತ್ತು ಎಂದರೆ ಸುಳ್ಳು. ನಾನು ಬನಶಂಕರಿಯಿಂದ ಬರಬೇಕಾದರೆ ಯೂ ಟರ್ನ್ ತೆಗೆದುಕೊಂಡೆ ಎಂದರೆ ಸುಳ್ಳು. ಹಿಂದಿನಿಂದ ವಾಹನ ನನಗೆ ಅಪಘಾತ ಪಡಿಸಿರುತ್ತದೆ. ನಾನು ರಸ್ತೆಯ ಎಡಭಾಗದಿಂದ ಯೂ ಟರ್ನ್ ತೆಗೆದುಕೊಳ್ಳುವಾಗ ಹಿಂದಿನಿಂದ ಬರುತ್ತಿದ್ದ ವಾಹನವನ್ನು ಗಮನಿಸದೇ ಇದ್ದುದ್ದರಿಂದ ಅಪಘಾತವಾಗಿದೆ ಎಂದರೆ ಸುಳ್ಳು. ಭಾವಚಿತ್ರ ಗಳನ್ನು ತೋರಿಸಿ ವಾಹನ ತಿರುವು ಪಡೆಯುತ್ತೀದ್ದೀರಾ ಎಂದು ಕೇಳಿದಾಗ ಸಾಕ್ಷಿಯು ಬಲಲೈನಿಗೆ ಬರುತ್ತಿದ್ದೆ ಎಂದು ಹೇಳುತ್ತಾರೆ. ಸದರಿ ಭಾವಚಿತ್ರದಲ್ಲಿ ನಾನು ತಿರುವು ಪಡೆಯುತ್ತಿದ್ದೆ ಎಂದರೆ ಸುಳ್ಳು. ವಕೀಲರು ಭಾವಚಿತ್ರ ಗಳನ್ನು ತೋರಿಸಿ ಅಪಘಾತದ ಸ್ಥಳ ಎಂದಾಗ ಸಾಕ್ಷಿಯು ಒಪ್ಪುತ್ತಾರೆ. ಅದರಲ್ಲಿ ನನ್ನ ವಾಹನ ಇರುತ್ತದೆ. ಭಾವಚಿತ್ರದಲ್ಲಿ ನನ್ನ ಗಾಡಿ ಅಪಘಾತ ಪಡಿಸಿದ ವಾಹನಕ್ಕೆ ಅಡ್ಡಲಾಗಿ ಬಂದಿದೆ ಎಂದರೆ ಸುಳ್ಳು. ನನ್ನ ಗಾಡಿಯ ಹಿಂಭಾಗ ಅಪಘಾತ ಪಡಿಸಿದ ಗಾಡಿ ಇಲ್ಲ ಎಂದರೆ ಸುಳ್ಳು. ನಾನು ಯಾವುದೇ ಸಿಗ್ನಲ್ ನೀಡದೇ ವಾಹನವನ್ನು ಎಡಭಾಗದಿಂದ ಬಲಭಾಗಕ್ಕೆ ತಿರಿಗಿಸಿದಾಗ ಅಪಘಾತವಾಗಿದೆ ಎಂದರೆ ಸುಳ್ಳು. ನಾನು ಅಪ್ರಾಪ್ತನಾಗಿದ್ದರಿಂದ ವಾಹನ ಚಾಲನೆ ಮಾಡಲು ಚೆನ್ನಾಗಿ ಬರುತ್ತಿರಲಿಲ್ಲ ಎಂದರೆ ಸುಳ್ಳು. ಆದ್ದರಿಂದ ಪರವಾನಿಗೆ ಇರಲಿಲ್ಲ ಎಂದರೆ ಸಾಕ್ಷಿಯು

ಎಲ್ ಎಲ್ ಇತ್ತು ಎಂದು ನುಡಿಯುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರಿ 9 ಭಾವಚಿತ್ರ ಗಳನ್ನು ನಿ ಆರ್-1 ರಿಂದ ನಿಆರ್ -9 ಎಂದು ಅದಕ್ಕೆ ಸಂಬಂದಪಟ್ಟ ಸಿಡಿಯನ್ನು ನಿಪಿ-10 ಎಂದು ಗುರುತಿಸಲಾಯಿತು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.